**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಭಟ್ಕಳ**

**ಸಿ.ಸಿ. ನಂ. 2122/2025**

**ಸಿ.ಡಬ್ಲ್ಯೂ 3, ಪಿ.ಡಬ್ಲ್ಯೂ 02**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ರಾಜೇಶ ಮಾದೇವ ನಾಯ್ಕ** |
| **ಗಂಡನ ಹೆಸರು** | : | **ಮಾದೇವ ನಾಯ್ಕ** |
| **ವಯಸ್ಸು** | : | 35 ವರ್ಷ |
| **ಉದ್ಯೋಗ** | : | ಚಾಲಕ |
| **ವಾಸ** | : | ತೆರ್ನಮಕ್ಕಿ, ಭಟ್ಕಳ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 11-08-2026**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದಃ-**

ಸಾಕ್ಷಿಯು ಸ್ಥಳ ಪಂಚನಾಮೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಸಹಿಯನ್ನು 2(ಬಿ) ಎಂದು ಗುರುತಿಸಲಾಯಿತು. ಸದ್ರಿ ದಾಖಲೆಗೆ ನಾನು ದಿನಾಂಕ 05/09/2025 ರಂದು ಚಾಸಾ-1ರವರ ಮನೆಯ ಬಳಿ ಜರುಗಿಸಿದ ಪಂಚನಾಮೆಗೆ ಸಹಿ ಹಾಕಿರುತ್ತೇನೆ. ನನ್ನೊಂದಿಗೆ ಚಾಸಾ-2ರವರು ಸಹಿ ಹಾಕಿರಿರುತ್ತಾರೆ. ಮಹಜರನ್ನು ಸಂಜೆ 5.45 ಗಂಟೆಯಿಂದ 6.45 ಗಂಟೆಯವೆರೆಗ ಜರುಗಿಸಿರಿರುತ್ತಾರೆ. ಘಟನಾ ಸ್ಥಳವನ್ನು ಚಾಸಾ-1ರವರು ತೋರಿಸಿರುತ್ತಾರೆ. ನನ್ನ ಸಮಕ್ಷಮದಲ್ಲಿ ನೀಲಿ ಬಣ್ಣದ ಚಪ್ಪಲ್ಲನ್ನು ವಶಪಡಿಸಿಕೊಂಡಿರುತ್ತಾರೆ ಅದನ್ನು ನಾನು ಈಗ ನೋಡಿ ಗುರುತಿಸುತ್ತೆನೆ ಅದನ್ನು ಈ ಮೊದಲೇ ಮುದ್ದೆ ಮಾಲು 1 ಎಂದು ಗುರುತಿಸಲಾಗಿದೆ. ಅದೇ ಸಂಧರ್ಭದಲ್ಲಿ ಘಟನಾ ಸ್ಥಳದ ಭಾವ ಚಿತ್ರವನ್ನು ತೆಗೆದಿರಿರುತ್ತಾರೆ, ಸದ್ರಿ ಭಾವ ಚಿತ್ರದಲ್ಲಿ ನಾನು ಇದ್ದೆನೆ. ಸದ್ರಿ ಭಾವ ಚಿತ್ರವನ್ನು ಈ ಮೊದಲೆ ನಿಪಿ-3 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಯವರಿಂದಃ**

ನಾನು ಬಿ.ಕಾಂ ಪದವಿಧರ. ವೃತ್ತಿಯಲ್ಲಿ ಚಾಲಕ. ನಮ್ಮ ಮನೆ ಚಾಸಾ-1 ರವರ ಮನೆಯಿಂದ 1 ಕಿಲೋಮೀಟರ ದೂರದಲ್ಲಿ ಇದೆ. ನಾನೇ ಘಟನಾ ಸ್ಥಳಕ್ಕೆ ಬಂದಿದೆ. ಪೋಲೀಸರು ನನಗೆ ನೋಟಿಸನ್ನು ನೀಡಿದ್ದಾರೆ. ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಾನು ಪಂಚನಾಮೆಯ ಕಾಲಕ್ಕೆ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಚಪ್ಪಲು

ಇದ್ದು ಅದನ್ನು ಹೊರತು ಪಡಿಸಿ ಗಲಾಟೆ ನಡೆದ ಬಗ್ಗೆ ಬೇರೆ ಕುರುಹು ಇರಲಿಲ್ಲ. ಘಟನಾ ಸ್ಥಳದಲ್ಲಿ ದೇವರ ಪೋಟೊ ಬಿದ್ದಿದ್ದು ಅದನ್ನು ಪೋಲಿಸರು ಜಪ್ತು ಪಡಿಸಿಕೊಂಡಿಲ್ಲ. ಪೋಟೊ ಮನೆಯ ಒಳಗ್ಗೆ ಬಿದ್ದ ವಿಚಾರವನ್ನು ಪೊಲೀಸರಿಗೆ ಹೇಳಿಲ್ಲ. ಚಾಸಾ-1 ರವರು ನಮ್ಮ ನೆರೆ ಮನೆಯವರಾಗಿರುವ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಮತ್ತು ಪೋಲಿಸರ ಹಾಗೂ ಪಿರ್ಯಾದಿದಾರರ ಕೋರಿಕೆ ಮೇರೆಗೆ ಠಾಣೆಯಲ್ಲಿ ಸಹಿ ಹಾಕಿದ್ದೇನೆಂದರೆ ಸರಿಯಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

Sd/-

**(ರೂಪಶ್ರೀ)**

**ಹಿರಿಯ ಸಿವಿಲ್ ನ್ಯಾಯಾಧೀಶರು, ಮತ್ತು**

**ಜೆ.ಎಂ.ಎಫ್.ಸಿ., ಭಟ್ಕಳ.**